ಕರ್ನಾಟಕ ಸರ್ಕಾರ ಸಿಆರ್‌ಪಿ.67

ಹೇಳಿಕೆ ಹಾಳೆ
ಆರ್‌ಪಿ.ಸಂ.57
ನಮೂನೆ ಸಂ.4
(ಸಿವಿಲ್)

# ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, (ಎಂ.ಎ.ಸಿ.ಟಿ.) ಕುಂದಾಪುರ.

**ಎಂ. ವಿ. ಸಿ. ಸಂಖ್ಯೆ: 764/22 ಪಿ ಡಬ್ಲ್ಯೂ:2**

**ಸಾಕ್ಷಿದಾರರ ಹೆಸರು** : ಡಾಃ ಕಾರ್ಲ್ಸನ್ ಬರ್ನಾಡ್ ಪಿರೇರಾ

**ತಂದೆ ಹೆಸರು** : ಹೋವೆಲ್ ಜೆ.ಪಿ. ಪಿರೇರಾ

**ವಯಸ್ಸು** : 38

**ವೃತ್ತಿ** : ಅಸೋಸಿಯೇಟ್ ಪ್ರೊಫೆಸರ್, ಪ್ಲಾಸ್ಟಿಕ್ ಸರ್ಜರಿ ವಿಭಾಗ ಕೆಎಂಸಿ ಮಣಿಪಾಲ

**ವಾಸ** : ಮಣಿಪಾಲ

**ದಿಃ 21-06-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ-** ಶ್ರೀ ಎ ಎಸ್ ಎಚ್ ರವರಿಂದ

ನಾನು ಈ ಪ್ರಕರಣದಲ್ಲಿ ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಈ ದಿನ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿಯ ಸಂಗತಿಗಳು ಸತ್ಯವಾಗಿವೆ.

ಗಾಯಾಳುವಿನ ಅಂಗನ್ಯೂನ್ಯತಾ ಪ್ರಮಾಣ ಪತ್ರ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು.

ಗಾಯಾಳುವಿನ ವೈದ್ಯಕೀಯ ಕಡತ ನೋಡುತ್ತಿದ್ದು, ಅದನ್ನು ನಿಪಿ-20 ಎಂದೂ ಹಾಗೂ ಗಾಯಾಳುವಿನ ಎಕ್ಸರೇ ಫಿಲಂ ನೋಡುತ್ತಿದ್ದು, ಅದನ್ನು ನಿಪಿ-21 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** 2ನೇ ಎದುರುದಾರ ಪರ ವಕೀಲರಾದ ಶ್ರೀ ಕೆ ಜಿ ಬಿ ರವರಿಂದ

ಗಾಯಾಳು ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ ಎಂದರೆ ಸರಿ. ಗಾಯಾಳುವಿಗೆ ಪ್ರಥಮವಾಗಿ ಮತ್ತು ಸಂಪೂರ್ಣ ಚಿಕಿತ್ಸೆ ನೀಡಿದ್ದು ನಾನೇ ಆಗಿರುತ್ತೇನೆ. ಗಾಯಾಳುವಿನ ಬಲಕೈಯ ಮೂರು ಬೆರಳು ಸಂಪೂರ್ಣವಾಗಿ ಜಜ್ಜಿ

ಹೋಗಿದ್ದು, ಅವುಗಳನ್ನು ಆ್ಯಂಪುಟೇಶನ್ ಮಾಡಲಾಗಿತ್ತು. ಕೇವಲ ಹೆಬ್ಬೆರಳು ಮತ್ತು ತೋರುಬೆರಳು ಮಾತ್ರ ಗಾಯಾಳುವಿಗೆ ಇರುತ್ತದೆ. ಗಾಯಾಳುವಿನ ಬಲಕೈಯ ತೋಳು ಮತ್ತು ಮಣಿಗಂಟಿಗೆ ಯಾವುದೇ ಪೆಟ್ಟಾಗಿಲ್ಲ. ಗಾಯಾಳುವಿನ ಹಸ್ತಕ್ಕೆ ಯಾವುದೇ ಪೆಟ್ಟಾಗಿಲ್ಲ ಅದು ಸಂಪೂರ್ಣವಾಗಿ ಗುಣಮುಖವಾಗಿದೆ ಎಂದರೆ ಸಾಕ್ಷಿ ಸರಿ ಅಲ್ಲಾ ಗಾಯಾಳುವಿನ ಬಲಕೈ ಹಸ್ತಕ್ಕೂ ಸಹಾ ಪೆಟ್ಟಾಗಿದ್ದು, ಗಾಯ ಈಗ ಗುಣವಾಗಿದೆ ಅಂತ ಸಾಕ್ಷಿ ನುಡಿಯುತ್ತಾರೆ. ಗಾಯಾಳುವಿಗೆ ಚಿಕಿತ್ಸೆ ಕೊಡುವ ಸಮಯದಲ್ಲಿ ಅವರು ಹೋಂ ಸ್ಟೇ ಗಳಲ್ಲಿ ರಿಸೆಪಕ್ಷನಿಷ್ಟ ಆಗಿ ಕೆಲಸ ಮಾಡುತ್ತಿದ್ದೇನೆ ಅಂತ ಹೇಳಿರುತ್ತಾರೆ. ಗಾಯಾಳು ಸಂಪೂರ್ಣವಾಗಿ ಗುಣಮುಖಳಾಗಿರುವುದರಿಂದ ಅವಳಿಗೆ ಆದಂತಹಾ ನ್ಯೂನ್ಯತೆಯಿಂದ ಅವಳ ಕೆಲಸದಲ್ಲಿ ಯಾವುದೇ ತೊಂದರೆ ಆಗುವುದಿಲ್ಲ ಅಂತ ಸಾಕ್ಷಿಗೆ ಕೇಳಿದಾಗ ಸಾಕ್ಷಿಯು ಅವಳ ಬಲಕೈಯ ಬೆರಳುಗಳು ಇಲ್ಲದಿದ್ದ ಕಾರಣ ಅವಳಿಗೆ ಬರೆಯಲು ಮತ್ತು ಅದನ್ನು ಉಪಯೋಗಿಸಲು ತೊಂದರೆ ಇದೆ ಅಂತ ನುಡಿಯುತ್ತಾರೆ. ಗಾಯಾಳುವಿನ ಹೆಬ್ಬೆರಳು ಮತ್ತು ತೋರುಬೆರಳಿನಲ್ಲಿ ಯಾವುದೇ ಸ್ಪರ್ಶದ ಅಭಾವ ಇರುವುದಿಲ್ಲ ಎಂದರೆ ಸಾಕ್ಷಿ ತೋರು ಬೆರಳಿಗೆ ನಾನು ಚರ್ಮ ಕಸಿ ಮಾಡಿರುವುದರಿಂದ ತೋರು ಬೆರಳಿನಲ್ಲಿ ಸ್ಪರ್ಶತೆ ಕಡಿಮೆಯಾಗಿದೆ ಅಂತ ನುಡಿಯುತ್ತಾರೆ. ಇಡೀ ದೇಹಕ್ಕೆ ಹೋಲಿಸಿದಾಗ ಗಾಯಾಳುವಿಗೆ ಆದಂತಹಾ ನ್ಯೂನ್ಯತೆ 1/3 ಭಾಗ ಆಗುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ಹೇಳಲಿಕ್ಕೆ ಆಗುವುಲ್ಲ ನಾನು ಕೊಟ್ಟಂತಹಾ ನ್ಯೂನ್ಯತೆ ಸಂಪೂರ್ಣವಾಗಿ ಬಲಕೈಗೆ ಸಂಬಂಧಪಟ್ಟಿದ್ದು ಅಂತ ನುಡಿಯುತ್ತಾರೆ. 2024 ರಲ್ಲಿ ಕೊನೆಯ ಬಾರಿಗೆ 28-03-2024 ರಂದು ಗಾಯಾಳು ನನ್ನ ಹತ್ತಿರ ಚಿಕಿತ್ಸೆಗೆ ಬಂದಿರುತ್ತಾರೆ. ಗಾಯಾಳು ಕೇವಲ ನ್ಯೂನ್ಯತಾ ಪ್ರಮಾಣ ಪತ್ರ ಪಡೆಯಲು ಮಾತ್ರ ಬಂದಿದ್ದಳು ಎಂದರೆ ಸಾಕ್ಷಿ ಚಿಕಿತ್ಸೆ ಸಂಪೂರ್ಣವಾಗಿತ್ತು ಅವಳನ್ನು ಪರೀಕ್ಷೆ ಮಾಡಿ ನಾನು ನ್ಯೂನ್ಯತಾ ಪ್ರಮಾಣ ಪತ್ರ ನೀಡಿರುತ್ತೇನೆಂದು ನುಡಿಯುತ್ತಾರೆ. ಗಾಯಾಳುವಿಗೆ ಆದಂತಹಾ ನ್ಯೂನ್ಯತೆಯಿಂದ ಅವಳಿಗೆ ಅವಳ ಜೀವನದಲ್ಲಿ ಬೇರೆ ಕೆಲಸ ಮಾಡಿಕೊಂಡು ಹೋಗಲು ಮತ್ತು ಅವಳ ದಿನನಿತ್ಯದ ಕೆಲಸ ಮಾಡಿಕೊಂಡು ಹೋಗಲು ಯಾವುದೇ ತೊಂದರೆ ಇಲ್ಲಾ ಎಂದರೆ ಸಾಕ್ಷಿಯು ಗಾಯಾಳು ಬಲಕೈಯಲ್ಲಿ ಸಂಪೂರ್ಣವಾಗಿ ಮುಷ್ಠಿ ಕಟ್ಟುವ ಶಕ್ತಿ ಮತ್ತು ಭಾರ ಎತ್ತುವ ಸಾಮರ್ಥ್ಯ ಕಡಿಮೆ ಆಗಿರುವುದರಿಂದ ದಿನನಿತ್ಯದ ಕೆಲಸ ಮಾಡಲು ಅವಳಿಗೆ ತೊಂದರೆ ಆಗುತ್ತದೆ ಅಂತ ನುಡಿಯುತ್ತಾರೆ. 2018 ರ ನಿರ್ದೇಶನದ ವಿರುದ್ಧವಾಗಿ ನಾನು ನ್ಯೂನ್ಯತಾ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸಾಕ್ಷಿ ಸರಿ ಅಲ್ಲಾ 2001 ಗಜೆಟೆಡ್ ನೋಟಿಫಿಕೇಶನ್ ಮಿನಿಸ್ಟ್ರಿ

ಆಫ್ ಸೋಶಿಯಲ್ ಜಸ್ಟೀಸ್ ಆ್ಯಂಡ್ ಎಂಪವರ್ ಮೆಂಟ್ ಆಧಾರವಾಗಿ ನೀಡಿದ್ದೇನೆ ಅಂತ ನುಡಿಯುತ್ತಾರೆ. ಗಾಯಾಳುವಿಗೆ ಹೆಚ್ಚಿನ ಪರಿಹಾರ ಸಿಗಲಿ ಅಂತ ಹೇಳಿ ಅವಳಿಗೆ ಅನುಕೂಲವಾಗುವಂತೆ ಹೆಚ್ಚಿನ ನ್ಯೂನ್ಯತಾ ಪ್ರಮಾಣ ಕೊಟ್ಟು ಅದಕ್ಕೆ ಪೂರಕವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**(ಎಂ.ಎ.ಸಿ.ಟಿ.) ಕುಂದಾಪುರ**